ದಿನಾಂಕ 28-03-2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ವಾದಿಗಳ ಪರ ವಕೀಲರಿಂದ**

ನನಗೆ ಈಗ ವಯಸ್ಸು ಸುಮಾರು 70-80 ವರ್ಷ ಇರಬಹುದು. ನನ್ನ ಮದುವೆಯಾಗಿ ಎಷ್ಟು ವರ್ಷ ಆಗಿದು ಎಂದು ನನಗೆ ನೆನಪಿಲ್ಲ. ನನ್ನ ಗಂಡನ ಹೆಸರು ಕಾಳಪ್ಪ ಎಂದರೆ ಸರಿ. ನಾನು ಪ್ರಸ್ತುತವಾಗಿ ನನ್ನ ಗಂಡನ ಮನೆಯಾದ ಮಲ್ಲಬಾದನಲ್ಲಿ ಇರುತ್ತೇನೆ.

ನನಗೆ 3 ಜನ ಗಂಡ ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಸರಿ. ನನ್ನ ಮಗಳನ್ನು 1ನೇ ಪ್ರತಿವಾದಿಗೆ ಮದುವೆ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿ. ನನ್ನ ತಂದೆಯ ಹೆಸರು ಬಸಲಿಂಗಪ್ಪ ಇದ್ದು ಅವರು ತೀರಿ ಕೊಂಡು ಸುಮಾರು ಬಹಳ ವರ್ಷಗಳು ಆಗಿರುತ್ತವೆ.

ನನ್ನ ಬಸಲಿಂಗಪ್ಪನ ತಂದೆಯ ಹೆಸರು ನಾಗಪ್ಪ ಎಂದರೆ ಸರಿ. ಆದರೆ ನಾನು ನಾಗಪ್ಪರವರನ್ನು ನೋಡಿರುವುದಿಲ್ಲ. ನಾನು ನಾಗಪ್ಪನ ತಮ್ಮ ಭೀಮಪ್ಪನು ಸಹ ನೋಡಿರುವುದಿಲ್ಲ. ಭೀಮಪ್ಪನ ಮಗ ಮಡಿವಾಳಪ್ಪನನ್ನು ನಾನು ನೋಡಿರುವುದಿಲ್ಲ. ನನ್ನ ತಂದೆಯ ಹೆಸರಲ್ಲಿ ಎಷ್ಟು ಆಸ್ತಿಗಳು ಇವೆ ಎಂದು ನನಗೆ ಗೊತ್ತಿಲ್ಲ. ಅವುಗಳ ಸರ್ವೆ ನಂಬರ ಮತ್ತು ಎಕರೆ, ಗುಂಟೆಗಳು ಹೇಳಲು ಬರುವುದಿಲ್ಲ.

ನನ್ನ ತಂದೆಯವರು ತೀರಿಕೊಂಡಾಗ ನನ್ನ ತಂದೆಯ ಎಲ್ಲಾ ಆಸ್ತಿಗಳು ನನ್ನ ತಮ್ಮ ತೇಜಪ್ಪನ ಹೆಸರಿಗೆ ಆಗಿರುತ್ತವೆ. ಪ್ರಸ್ತುತವಾಗಿ ಎಲ್ಲ ಆಸ್ತಿಗಳು ತೇಜಪ್ಪನ ಹೆಸರಿಗೆ ಇವೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾಗಪ್ಪ ಮತ್ತು ವಾದಿಯ ಹೆಸರಿನಲ್ಲಿ ಎಷ್ಟು ಆಸ್ತಿಗಳು ಇವೆ ಎಂದು ನನಗೆ ಗೊತ್ತಿಲ್ಲ. ವಾದಿಯು ಯಾವ ಜಮೀನನ್ನು ಸಾಗುವಳಿ ಮಾಡುತ್ತಾನೆ ಎಂದರೆ ಸಾಕ್ಷಿಯು ಅವನ ಹೆಸರಿನಲ್ಲಿ ಯಾವುದು ಜಮೀನು ಇಲ್ಲ ಎಂದು ನುಡಿಯುತ್ತಾರೆ.

ನನ್ನ ತಮ್ಮ ತೇಜಪ್ಪ ತೀರಿಕೊಂಡು 20 ವರ್ಷಗಳು ಆಗಿರುತ್ತದೆ. ತೇಜಪ್ಪ ಸಾಯುವ ಸಮಯದಲ್ಲಿ ಎಷ್ಟು ಆಸ್ತಿಗಳು ಅವನ ಹೆಸರಿನಲ್ಲಿ ಇರುತ್ತವೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಮತ್ತು ನನ್ನ ತಮ್ಮ ತೀರಿಕೊಂಡ ನಂತರ ನನಗೆ ಯಾವುದೆ ಆಸ್ತಿಗಳು ಕೊಟ್ಟಿರುವುದಿಲ್ಲ. ತೇಜಪ್ಪ ತೀರಿಕೊಂಡ ಮೇಲೆ ಎಲ್ಲ ಜಮೀನುಗಳನ್ನು 1ನೇ ಪ್ರತಿವಾದಿಗೆ ಮಾಡಿರುತ್ತಾನೆ ಎಂದರೆ ಸರಿ. ನನಗೆ ಎಷ್ಟು ಜನ ತಮ್ಮಂದಿರು ಎಂದರೆ ಸಾಕ್ಷಿಯು ನನಗೆ ಒಬ್ಬನೆ ತಮ್ಮ ಇದ್ದನು ಎಂದು ನುಡಿಯುತ್ತಾರೆ.

ಬಸಲಿಂಗಪ್ಪನಿಗೆ ನಾನು ಮತ್ತು ತೇಜಪ್ಪ ಮತ್ತು ಹಣಮಂತ್ರಾಯ ಮಕ್ಕಳು ಎಂದರೆ ಸರಿಯಲ್ಲ. ಹಣಮಂತ್ರಾಯ ಯಾರು ಎಂದರೆ ನನ್ನ ತಾಯಿ ಮೊದಲನೆಯ ಮದುವೆಯಿಂದ ನಾಗನೂರು ಗ್ರಾಮದಲ್ಲಿ ಹುಟ್ಟಿರುತ್ತಾರೆ ಎಂದು ನನ್ನ ತಂದೆ ನಾನು 8-10 ವರ್ಷಗಳು ಇದ್ದಾಗ ಹೇಳಿರುತ್ತಾರೆ ಸಾಕ್ಷಿಯು ನುಡಿಯುತ್ತಾರೆ.

ಹಣಮಂತ್ರಾಯರ ತಾಯಿಯ ಹೆಸರು ನನಗೆ ಗೊತ್ತಿಲ್ಲ. ವಾದಿಯು ಹಣಮಂತ್ರಾಯನ ಮಗ ಎಂದರೆ ಸರಿ. ಹಣಮಂತ್ರಾಯ ತಂದೆ ಎಂದು ಹೇಳುತ್ತಿರುವ ಶೀವಪ್ಪನನ್ನು ನಾನು ನೋಡಿರುವುದಿಲ್ಲ. ನಾನು ಶೀವಪ್ಪನಿಗೆ ಸಂಬಂಧ ಪಟ್ಟ ಕಾಗದ ಪತ್ರಗಳನ್ನು ನೋಡಿರುವುದಿಲ್ಲ. 1ನೇ ಪ್ರತಿವಾದಿಯು ಹಣಮಂತ್ರಾಯನ ತಂದೆ ಮತ್ತು

ತಾಯಿಯ ಬಗ್ಗೆ ದಾಖಲೆಗಳನ್ನು ತೋರಿಸಿದ್ದಾರೆ ಎಂದರೆ ಸಾಕ್ಷಿಯು ತೋರಿಸಿರುವುದಿಲ್ಲ ಎಂದು ಹೇಳುತ್ತಾರೆ. ನಾನು ಹಣಮಂತ್ರಾಯರ ತಂದೆ ತಾಯಿಯ ಬಗ್ಗೆ ದಾಖಲೆಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ.

ನಿಪಿ-32ರಲ್ಲಿ ಕಾಲಂ ನಂಬರ 2ರಲ್ಲಿ ಹಣಮಂತ್ರಾಯ ತಂದೆ ಬಸಲಿಂಗಪ್ಪ ಎಂದು ನಮೂದು ಆಗಿರುತ್ತದೆ ಎಂದರೆ ಸಾಕ್ಷಿಯು ಸಳ್ಳಿನಿಂದ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-37ರಲ್ಲಿ ಕಾಲಂ ನಂಬರ 2ರಲ್ಲಿ ಕೂಡ ಹಣಮಂತ್ರಾಯ ತಂದೆ ಬಸಲಿಂಗಪ್ಪ ಎಂದು ನಮೂದು ಆಗಿರುತ್ತದೆ ಎಂದರೆ ಸಾಕ್ಷಿಯು ಸಳ್ಳಿನಿಂದ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ನಿಪಿ-39ರಲ್ಲಿ ಕಾಲಂ ನಂಬರ 2ರಲ್ಲಿ ಕೂಡ ಹಣಮಂತ್ರಾಯ ತಂದೆ ಬಸಲಿಂಗಪ್ಪ ಎಂದು ನಮೂದು ಆಗಿರುತ್ತದೆ ಎಂದರೆ ಸಾಕ್ಷಿಯು ಸಳ್ಳಿನಿಂದ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಹಣಮಂತ್ರಾಯ ತಂದೆ ಬಸಲಿಂಗಪ್ಪನವರು ಯಾರು ಎಂದರೆ ನನಗೆ ಗೊತ್ತಿಲ್ಲ.

1ನೇ ಪ್ರತಿವಾದಿಯು ನಿಡಿ-1ನ್ನು ನನಗೆ ತೋರಿಸಿರುವುದಿಲ್ಲ. ನಿಡಿ-1ರಲ್ಲಿ ಬಸ್ಸಮ್ಮ ಎಂದು ಕ್ರಮ ಸಂಖ್ಯೆ 7 ಮತ್ತು 14 ಮತ್ತು 15ರಲ್ಲಿ ಬಸ್ಸಮ್ಮ ಎಂದು ಬಂದಿರುತ್ತದೆ ಎಂದರೆ ಸಾಕ್ಷಿಯು ನನ್ನ ತಮ್ಮನ ಹೆಂಡತಿಯ ಹೆಸರು ಬಸ್ಸಮ್ಮ ಎಂದು ನುಡಿಯುತ್ತಾರೆ. ನಿಡಿ-1ರಲ್ಲಿ ಬಸಲಿಂಗಪ್ಪನ ತಂದೆಯ ಹೆಸರು ಬರೆಯಿಸಿಲ್ಲ ಎಂದರೆ ನನಗೆ ಗೋತ್ತಿಲ್ಲ. ನಿಡಿ-1ನ್ನು ಯಾರು ಮಾನ್ಯ ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತಾರೆ ಎಂದರೆ ನನಗೆ ಗೋತ್ತಿಲ್ಲ.

ನಿಪಿ-54ರಲ್ಲಿ ಹಣಮಂತ್ರಾಯರ ತಂದೆಯ ಹೆಸರು ಬಸಲಿಂಗಪ್ಪ ಎಂದು ನಮೂದು ಆಗಿರುತ್ತದೆ ಎಂದರೆ ಸಾಕ್ಷಿಯು ಸುಳ್ಳುನಿಂದ ತಯಾರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-55ರಲ್ಲಿ ನಿಂಗಮ್ಮನ ಗಂಡನ ಹಸೆರು ಹಣಮಂತ್ರಾಯ ಎಂದು ಬರೆದಿರುತ್ತಾರೆ ಎಂದರೆ ಸರಿ. 1ನೇ ಪ್ರತಿವಾದಿಗೆ ನನ್ನ ಮಗಳನ್ನು ಕೊಟ್ಟಿರುವುದರಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ